CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.929/2018

| | |
|---|---|
| ಸಾಕ್ಷಿದಾರರ ಹೆಸರು | ರತ್ನಮ್ಮ |
| ತಂದೆಯ ಹೆಸರು | ಶಿವಬಸಪ್ಪ |
| ವಯಸ್ಸು | 40 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಬೋಳಮಲ್ಲಪ್ಪನದೊಡ್ಡಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 29.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರ ಪರಿಚಯ ಇರುತ್ತದೆ. ಅವರು ನನ್ನ ಸಂಬಂಧಿಕರು. ಆರೋಪಿಗಳು ನನ್ನ ಮೇಲೆ ಯಾವುದೇ ರೀತಿ ಜಗಳ ಮಾಡಿ ಹೊಡೆದು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ನಾನು ಈ ಸಂಬಂಧ ಯಾವುದೇ ದೂರು ಮತ್ತು ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ನಾನು ಸುಮಾರು 10 ರಿಂದ 15 ವರ್ಷಗಳ ಹಿಂದೆ ಪೋಲೀಸ್ ಠಾಣೆಗೆ ಬೇರೆ ಯಾವುದೋ ಕೆಲಸದ ಮೇರೆಗೆ ಹೋದಾಗ ಅಲ್ಲಿ 2-3 ಖಾಲಿ ಬಿಳಿಯ ಹಾಳೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನಗೆ ಯಾವುದಕ್ಕೆ ಮತ್ತು ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರು ಆಗಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನನ್ನನ್ನು ಪೋಲೀಸರು ಯಾವುದೇ ಪಂಚನಾಮೆಗೆ ಕರೆದಿರಲಿಲ್ಲ ಹಾಗೂ ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ನಾನು ದಿನಾಂಕ 18.11.2015 ರಂದು ಈಗ ಸವಿಸ್ತಾರವಾಗಿ ಓದಿ ಹೇಳಿದಂತೆ ನಾನು ಪೋಲೀಸರಿಗೆ ಆರೋಪಿಯ ವಿರುದ್ದ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿನಾಂಕ 21.11.2015 ರಂದು ಕನಕಪುರ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ ದೊಡ್ಡಿ ಗ್ರಾಮದ ವಾಸಿಯಾದ ರತ್ನಮ್ಮ ರವರು ವಾಸವಿರುವ ಮನೆಯ ಹಿಂಭಾಗದಲ್ಲಿರುವ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 9 ರಿಂದ 9.45 ಗಂಟೆಯವರೆಗೂ ಈಗ ಓದಿ ಹೇಳಿದಂತೆ ಮಹಜರ್ ಮಾಡಿ ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 21.11.2015 ರಂದು ಈಗ ಸವಿಸ್ತಾರವಾಗಿ ಓದಿ ಹೇಳಿದಂತೆ ಮುಂದುವರಿದ ಹೇಳಿಕೆಯನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ದಾಖಲೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆಂನದರೆ ಸರಿ. ಆದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

CW.1 PW.1

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಏನೂ ಇರುವುದಿಲ್ಲ**

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**

CW.1 PW.1